## ನುಡಿಮಲ್ಲಿಗೆ

ಉದಾರ ಮನುಷ್ಯನು ಕೊಟ್ಟು ಕೊಟ್ಟು ಶ್ರೀಮಂತನಾಗಿರುವನು.
ಜಿಪುಣನು ಕೂಡಿಟ್ಟು ಬಡವನಾಗುವನು.

■ ಜರ್ಮನ್ ನಾಣ್ಣುಡಿ

## ಕಹಿ ಮಾತ್ರೆಗಳು



ಶ್ರೀಮಂತನಾರು? ಬಳಿಯಲ್ಲಿ ಚಿನ್ನ-ಬೆಳ್ಳಿ-ವಜ್ರ-ವೈಢೂರ್ಯ ಇರುವವನೇನು? ಅಲ್ಲ, ಯಾವ ಸ್ಥಿತಿಯಲ್ಲೂ ಪೂರ್ಣ ಸಂತೋಷದಿಂದ ಜೀವಿಸುವವನೇ ಶ್ರೀಮಂತ. ಅಂತಾದರೆ ದರಿದ್ರನಾರು? ಯಾರ ಬಳಿ ಹಣವಿಲ್ಲವೋ ಆತನೇ ಬಡವನೇನು? ಇಲ್ಲ! ಯಾರಿಗೆ ಲಾಲಸೆ ಅಧಿಕವೋ ಆತ ದರಿದ್ರನು. ಇಲ್ಲಿ ಧನದಿಂದ ಬಡವರಾದವರು ಕಡಿಮೆ, ಮನದಿಂದ ಬಡವರಾದವರು ಅಧಿಕ. ಯಾರ ಬಳಿ ತಿನ್ನಲು-ಕುಡಿಯಲು ಇಲ್ಲವೋ ಆತ ಬಡವ ಎಂಬುದು ದಿಟ. ಆದರೆ ಯಾರ ಬಳಿ ತಿನ್ನಲು-ಕುಡಿಯಲು ಸಾಕಾಗವಷ್ಟು ಸಾಮಗ್ರಿ ಇರುವುದೋ ಆತ ಇಲ್ಲದವನಿಗಿಂತ ದೊಡ್ಡ ಬಡವ. ಕಾರನ ಇಷ್ಟಪಟ್ಟುದನ್ನು ತಿನ್ನಲಾರ-ಕುಡಿಯಲಾರ. ಏಕೆಂದರೆ ವೈದ್ಯ ತಿನ್ನಬಾರದೆಂದು ಹೇಳಿದ್ದಾನೆ.

-ಮುನಿಶ್ರೀ ತರುಣಸಾಗರ್‌ಜೀ

## ಡಿ.ವಿ.ಜಿ. ಚಿಂತನೆ–142



ವೋಟು ಸ್ವಂತದ ಸ್ವತ್ತಲ್ಲ

ವರಣ ಪತ್ರ, ''ವೋಟು'' ಅಥವಾ ಇಷ್ಟಮುದ್ರೆ ಅಥವಾ ಮತಸೂಚನೆ ಎಂಬುದು ಒಂದು ದೊಡ್ಡ ರಾಷ್ಟ್ರಾಧಿಕಾರ. ಆದರೆ ಅದು ಕೇವನ ನಮ್ಮ ನಮ್ಮ ಸ್ವಂತಿ ಇಷ್ಟಕ್ಕೆ ಒಳಪಟ್ಟ ಅಧಿಕಾರವಲ್ಲ ; ನಮ್ಮಂಥ ಹತ್ತಾರು, ನೂರಾರು, ಸಾವಿರಾರು ಮಂದಿಯ ಇಷ್ಟಗಳೊಡನೆ ಬೆರೆತು ಕಾರ್ಯಕಾರಿಯಾಗುವ ಅಧಿಕಾರ, ಬಿಡಿಬಿಡಿಯಾಗಿದ್ದಲ್ಲಿ ಅದಕ್ಕೆ ಬೆಲೆಯಿಲ್ಲ ; ಒಟ್ಟುಗೂಡಿದಾಗಲೇ ಅದಕ್ಕೆ ಬೆಲೆ. ಆ ಅಧಿಕಾರವು ರಾಜ್ಯದಲ್ಲಿರುವ ಸಮಸ್ತರ ಯೋಗಕ್ಷೇಮಗಳನ್ನೂ ವಿಚಾರಮಾಡಿ ತೀರ್ಮಾನಪಡಿಸುವ ಕಾರ್ಯಕ್ಕೆ ಸಂಬಂಧಪಟ್ಟದ್ದು. ಆದಕಾರಣ ಆ ಅಧಿಕಾರದ ವಿನಿಯೋಗದಲ್ಲಿ ಸಮಸ್ತ ದೇಶೀಯರಿಗೂ ಬಾಧ್ಯತೆಯುಂಟು. ಅದು ಯಾರೊಬ್ಬರಿಗೂ ಸ್ವಂತದ ಸ್ವತ್ತಲ್ಲ, ಅದನ್ನು ಸಮಸ್ತ ಪ್ರಜಾಸಮುದಾಯದ ಪರವಾಗಿ ನಾವು ಉಪಯೋಗಿಸಬಹುದೇ ವಿನಾ, ನಮ್ಮ ನಮ್ಮ ಮನಸ್ಸಿಗೆ ತೋರಿದಂತೆ ಉಪಯೋಗಿಸಬಾರದು. ಅದನ್ನು ಇಷ್ಟಬಂದಂತೆ ಇನಾಮಾಗಿ ಕೊಡುವುದಕ್ಕೂ ಅಥವಾ ಮಾರುವುದಕ್ಕೂ ಯಾರಿಗೂ ಸ್ವಾತಂತ್ರ್ಯವಿಲ್ಲ, ಅದು ಒಂದು ''ಟ್ರಸ್ಟ್'', ನ್ಯಾಸ ನಿಕ್ಷೇಪ, ವಿಶ್ವಾಸ ನ್ಯಸ್ತವಸ್ತು, ನಂಬಿದವರಿಗಾಗಿ ನಾವು ಕಾಪಾಡಿಕೊಂಡಿರುವ ಒಡವೆ. ಅದರ ರಕ್ಷಣೆ ನಮಗೆ ಕರ್ತವ್ಯ ; ಅದರ ಸದುಪಯೋಗ ನಮ್ಮ ಜವಾಬ್ದಾರಿ. ಆದರೆ ಅದರಿಂದಾಗಬಹುದಾದ ಲಾಭಕ್ಕೆ ನಾವು ಕೈಚಾಚ ತಕ್ಕದ್ದಲ್ಲ.

■ ಡಿ.ವಿ.ಗುಂಡಪ್ಪ(ಕೃತಿ: ''ರಾಜ್ಯಶಾಸ್ತ್ರ'', ''ಡಿವಿಜಿ ಕೃತಿಶ್ರೇಣಿ-5'')

## ದೌರ್ಜನ್ಯ ತಡೆಗಟ್ಟುವುದು ಎಲ್ಲರ ಜವಾಬ್ದಾರಿ

>>> 1ನೇ ಪುಟದಿಂದ... ಮತ್ತು ಅವರ ದಿನಚರಿಯ ಬಗ್ಗೆ ಪೋಷಕರು ಕಾಳಜಿವಹಿಸಬೇಕು ಎಂದು ಹೇಳಿದರು. ಮಕ್ಕಳ ಸಹಾಯವಾಣಿಯ ನಿರ್ದೇಶಕಿ ಶ್ರೀಮತಿ ಗೀತಾ ಪಾಟೀಲ್ ಮಾತನಾಡಿ, ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳ ಸಹಾಯವಾಣಿ ತಂಡದಿಂದ ಚೈಲ್ಡ್ ಲೈನ್ ಸೇ ದೋಸ್ತಿ ವೀಕ್ ಆಚರಿಸಲಾಗುತ್ತಿದೆ. ಈ ದಿನ ಮಕ್ಕಳ ಸಹಾಯವಾಣಿಗೆ ಸ್ವಯಂ ಸೇವಕರನ್ನು ಸಹ ಸಂಗ್ರಹಣೆ ಮಾಡುವುದು ಹಾಗೂ ಯಾವುದೇ ಒಬ್ಬ ಅಸಹಾಯಕ, ಪಾಲನೆ ಪೋಷಣೆ ಮತ್ತು ರಕ್ಷಣೆಯ ಅವಶ್ಯಕವಿರುವ ಮಕ್ಕಳನ್ನು ಕಂಡರೆ ಮಕ್ಕಳ ಸಹಾಯವಾಣಿಗೆ ಕರೆ ಮಾಡುವಂತೆ ಜನತೆಗೆ ತಿಳಿಸುವುದಾಗಿದೆ. ಮಕ್ಕಳ ಸಹಾಯವಾಣಿಯ ಬಗ್ಗೆ ಸಂಪೂರ್ಣ ಮಾಹಿತಿ ನೀವು ಹೊಂದಿರಬೇಕು ಮತ್ತು ಅದರ ಉಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು

ಅಧ್ಯಕ್ಷತೆ ವಹಿಸಿದ್ದ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಎಸ್.ಎಚ್. ಮಜೀದ ಮಾತನಾಡಿ, ಸಮಾಜದಲ್ಲಿರುವ ಪ್ರತಿಯೊಬ್ಬರಿಗೂ ತನ್ನದೆ ಆದ ಹಕ್ಕುಗಳಿರುತ್ತವೆ. ಅವುಗಳನ್ನು ಯಾರಿಂದಲು ಕಸಿದುಕೊಳ್ಳಲು ಸಾಧ್ಯವಿಲ್ಲ, ಮಕ್ಕಳ ಹಕ್ಕುಗಳ ರಕ್ಷಣೆಯ ಜೊತೆಗೆ ಅವರಿಗೆ ಉತ್ತಮ ಸಂಸ್ಕಾರ ಮತ್ತು ಜ್ಞಾನವನ್ನು ಬೆಳೆಸುವಲ್ಲಿ ನಾವೆಲ್ಲರು ಇಂದು ಪ್ರಯತ್ನಿಸಬೇಕಾಗಿದೆ. ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ, ಮಕ್ಕಳು ಕೂಡಾ ಅವರ ಹಕ್ಕುಗಳನ್ನು ಯಾರು ಕಸಿದುಕೊಳ್ಳದಂತೆ ಜಾಗೃತರಾಗಿರಬೇಕು. ಮಕ್ಕಳು ಮತ್ತು ಪೋಷಕರು ಯಾವುದೇ ರೀತಿಯ ಭಯಪಡುವ ಅವ್ಯಕತೆಯಿಲ್ಲ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾದಲ್ಲಿ ಧೈರ್ಯವಾಗಿ ಮಕ್ಕಳ ಸಹಾಯವಾಣಿಯ ದೂರವಾಣಿ ಸಂಖ್ಯೆ 1098 ಕ್ಕೆ ಕರೆಮಾಡಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿ.ಡಿ.ಪಿ.ಒ. ಉಮಾ, ನಗರಸಭಾ ಸದಸ್ಯರಾದ ಐ.ಯು.ಪಠಾಣ್, ಹನುಮಂತಪ್ಪ ದೇವಗಿರಿ, ಮಲ್ಲೇಶಪ್ಪ ಪಟ್ಟಣಶೆಟ್ಟಿ, ಸತೀಶ್ ಹಾವೇರಿ, ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುತ್ತೇವೆ ಎಂದು ಪ್ರತಿಜ್ಞಾವಿಧಿ ಬೋಧಿಸಲಾಯಿತು ಹಾಗೂ ಚೈಲ್ಡ್‌ಲೈನ್ ಸೇ ದೋಸ್ತಿ ವೀಕ್‌ನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಶಿವರಾಜ ಸ್ವಾಗತಿಸಿದರು, ಹೇಮಂತ್ ಕಾರ್ಯಕ್ರಮ ನಿರೂಪಿಸಿದರೆ ಕೊನೆಯಲ್ಲಿ ಅಶೋಕ್ ವಂದಿಸಿದರು.

## ಇಂದು ಕಟ್ಟಡ ಕಾರ್ಮಿಕರ ಪ್ರತಿಭಟನೆ

ದಾವಣಗೆರೆ

ರಾಜ್ಯ ಸರ್ಕಾರ ಕೈಗೊಂಡಿರುವ ಕಟ್ಟಡ ಕಾರ್ಮಿಕರಿಗೆ ಮಾರಕವಾಗಿರುವ ಯೋಜನೆ ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಂದು ನಗರದಲ್ಲಿ ವಿಶ್ವಮಾನವ ಜಿಲ್ಲಾ ಮತ್ತು ಇತರೆ ಕಟ್ಟಡ ಕಾರ್ಮಿಕರ ಸಂಘದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್.ಜೆ.ನಿಂಗಪ್ಪ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ಬೆಳಗ್ಗೆ 11.30ಕ್ಕೆ ಅಂಬೇಡ್ಕರ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಹೊರಟು ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿಪತ್ರ ಸಲ್ಲಿಸಲಾಗುವುದು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮಾತ್ರ ಬಳಸಬೇಕೆಂದು ಆಗ್ರಹಿಸಿದರು.

ಇಲಾಖೆಯಿಂದ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಮಿಕರಿಗೆ ಪ್ರಯೋಜನಕಾರಿಯಲ್ಲದ ಯೋಜನೆಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ವೆಂಕಟೇಶ, ತಿಪ್ಪಣ್ಣ, ಮಹಮದ್ ಇಸಾಕ್, ಮಹಬೂಬ್, ರೇವಣಸಿದ್ದಪ್ಪ, ಮಂಜುನಾಥ ಮತ್ತಿತರರು ಹಾಜರಿದ್ದರು.

## ಇಂದು ವಿವಿಧ ಸಭೆಗಳು

ದಾವಣಗೆರೆ

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನ.15 ರಂದು ಬೆಳಿಗ್ಗೆ 11 ಕ್ಕೆ ಜಿಲ್ಲಾ ಮಟ್ಟದ ಮಕ್ಕಳ ಸಹಾಯವಾಣಿ ಸಲಹಾ ಸಮಿತಿ ಸಭೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಟ್ಟದ ಸಮಿತಿ ಸಭೆ ಹಾಗೂ 11.30 ಕ್ಕೆ ಕೇಂದ್ರ ಸರ್ಕಾರದ ಸ್ವಾಧಾರ ಯೋಜನೆಯಡಿಯಲ್ಲಿ ಮಂಜೂರಾದಂತಹ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆ ಏರ್ಪಡಿಸಲಾಗಿದೆ ಹಾಗೂ ಮಧ್ಯಾಹ್ನ 12. ಕ್ಕೆ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಕಾಯ್ದೆ-2005 ರ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಓದುವ ಆಸಕ್ತಿ ತರಿಸುವ ಕಾಲೇಜು ಕುಮಾರ್




ದಾವಣಗೆರೆ

ರಾಜ್ಯಾದ್ಯಂತ ಯಶಸ್ವಿ ಪ್ರದರ್ಶನ ನೀಡುತ್ತಿರುವ ಕಾಲೇಜು ಕುಮಾರ್ ಚಿತ್ರವು ಅರ್ಧಕ್ಕೆ ಓದು ನಿಲ್ಲಿಸಿರುವ ಹಲವರಲ್ಲಿ ಮತ್ತೆ ಓದುವಗೀಳು ಬೆಳೆಸುತ್ತಿದೆ ಎಂದು ಚಿತ್ರದ ನಿರ್ದೇಶಕ ಹರಿ ಸಂತೋಷ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತಮ ಸಂದೇಶ ಹೊಂದಿರುವ ಕಾಲೇಜು ಕುಮಾರ್ ಚಿತ್ರಕ್ಕೆ ರಾಜ್ಯಾದ್ಯಂತ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಚಿತ್ರವನ್ನು ನೋಡಿದ ಪ್ರೇಕ್ಷರಲ್ಲಿ ಅದರಲ್ಲೂ ಕಾರಣಾಂತರದಿಂದ ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸಿರುವವರಲ್ಲಿ ಮತ್ತೆ ಓದುವ ಸಧಾಭಿರುಚಿ ಬೆಳೆಸುತ್ತಿದೆ ಎಂದು ಹೇಳಿದರು.

ಎಂ.ಎಲ್. ಪಿಕ್ಚರ್ಸ್ ಬ್ಯಾನರ್‌ನಲ್ಲಿ ಮೂಡಿ ಬಂದಿರುವ ಕಾಲೇಜು ಕುಮಾರ್ ಚಿತ್ರವನ್ನು ಪದ್ಮನಾಭರವರು ನಿರ್ಮಿಸಿದ್ದು, ಚಿತ್ರದಲ್ಲಿ ಆರುಮುಗಂ ಖ್ಯಾತಿಯ ರವಿಶಂಕರ್, ನಟಿ ಶೃತಿ, ನಟ ವಿಕ್ಕಿ, ನಟಿ ಸಂಯುಕ್ತ ಹೆಗಡೆ ಮತ್ತಿತರರು ಅಭಿನಯಿಸಿದ್ದು, ಇಡೀ ಕುಟುಂಬದ ಸದಸ್ಯರು ಕೂತು ನೋಡುವ ಸಧಾಭಿರುಚಿಯ ಚಿತ್ರ ಇದಾಗಿದೆ ಎಂದು ಹೇಳಿದರು.

ಸಿಂಗಲ್ ಸ್ಕ್ರೀನ್, ಮಲ್ಟಿ ಫ್ಲೆಕ್ಸ್ ಸೇರಿದಂತೆ ರಾಜ್ಯದ 200 ಚಿತ್ರ ಮಂದಿರಗಳಲ್ಲಿ ಚಿತ್ರ ಪ್ರದರ್ಶನವಾಗುತ್ತಿದ್ದು, ಅದರಲ್ಲೂ ಮಾಲ್‌ಗಳಲ್ಲಿ ದಿನಕ್ಕೆ ಎರಡು ಬಾರಿ ಹೆಚ್ಚುವರಿ ಪ್ರದರ್ಶನ ಕಾಣುತ್ತಿದೆ. ಬೇರೆ ಭಾಷೆಗೆ ಈ ಚಿತ್ರವನ್ನು ನಿರ್ದೇಶಿಸಲು ಅವಕಾಶ ಸಿಕ್ಕರೆ ಅದೇ ನನ್ನ ಸೌಭಾಗ್ಯವಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ನಟ ರವಿಶಂಕರ್ ಮಾತನಾಡಿ, ಈ ಚಿತ್ರದಲ್ಲಿ ದೊಡ್ಡ ತಾರಗಣವಿಲ್ಲ, ಆದರೆ, ಚಿತ್ರಕಥೆಯೇ ಸಿನೆಮಾಕ್ಕೆ ದೊಡ್ಡ ಹಿರೋ ಆಗಿದೆ. ಚಿತ್ರ ತೆರೆ ಕಂಡು ಐದು ದಿನಗಳಲ್ಲೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ತೆಲುಗು, ತಮಿಳು ಚಿತ್ರ ರಂಗದ ಗಮನ ಸೆಳೆದಿದೆ. ಈ ಚಿತ್ರವನ್ನು ತೆಲುಗು ಹಾಗೂ ತಮಿಳು ಭಾಷೆಗೆ ರಿಮೇಕ್ ಮಾಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಚಿತ್ರ ತಂಡದ ಹೊಸ ಪ್ರಯತ್ನಕ್ಕೆ ಒಳ್ಳೆಯ ಬೆಂಬಲ ಸಿಗುತ್ತಿದೆ ಎಂದು ಹೇಳಿದರು.

ದರ್ಶನ್ ಅಭಿನಯದ ಕುರುಕ್ಷೇತ್ರ, ಪುನೀತ್ ರಾಜಕುಮಾರ್ ಅಭಿನಯದ ಅಂಜನಿಪುತ್ರ, ದುನಿಯಾ ವಿಜಿ ನಟಿಸಿರುವ ಕನಕ ಚಿತ್ರಗಳಲ್ಲಿ ತಾವು ಪಾತ್ರ ನಿರ್ವಹಿಸಿದ್ದು, ಶೀಘ್ರದಲ್ಲಿಯೇ ಈ ಚಿತ್ರಗಳು ತೆರೆ ಕಾಣಲಿವೆ ಎಂದು ಹೇಳಿದರು.

ಹಿರಿಯ ನಟಿ ಶೃತಿ ಮಾತನಾಡಿ, ಕಾಲೇಜು ಕುಮಾರ್ ಅಪ್ಪಟ ಕನ್ನಡ ಚಿತ್ರವಾಗಿದೆ. ಮನರಂಜನೆಯ ಜತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡಿದೆ. ನಿರ್ದೇಶಕರು ಅಷ್ಟು ಸಣ್ಣ ವಯಸ್ಸಿನಲ್ಲಿಯೇ ಇಂತಹ ಚಿತ್ರಕತೆ ಆರಿಸಿಕೊಂಡಿರುವುದೇ ಚಿತ್ರದ ಯಶಸ್ವಿಗೆ ಕಾರಣವಾಗಿದೆ. ಚಿತ್ರ ತಂಡ ಎಲ್ಲೂ ಹೋದರೂ ಪ್ರೇಕ್ಷಕರು ಸಂಭ್ರಮದಿಂದ ಬರ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಹಿರಿತೆರೆ, ಕಿರುತೆರೆ ಹಾಗೂ ರಂಗಭೂಮಿ ಬೇರೆ, ಬೇರವಲ್ಲ. ಎಲ್ಲವೂ ಒಂದೇ ಎಂದ ಅವರು, ಒಳ್ಳೆಯ ಪ್ರಯತ್ನ ಮಾಡಿದರೆ ನಾನು ಸ್ವಾಗತಿಸುತ್ತೇನೆ ಎಂದು ನಟ ಉಪೇಂದ್ರ ಹೊಸ ರಾಜಕೀಯ ಪಕ್ಷ ಕಟ್ಟುತ್ತಿರುವ ಬಗೆಗಿನ ಪ್ರಶ್ನೆಗೆ ಉತ್ತರಿಸಿದರು.

ನಟ ವಿಕ್ಕಿ ಮಾತನಾಡಿ, ಇದು ನನ್ನ ಎರಡನೇಯ ಸಿನೆಮಾವಾಗಿದ್ದು, ಇಡೀ ಕುಟುಂಬದ ಸದಸ್ಯರು ಒಂದೇ ಕಡೆ ಕೂತು ನೋಡು ಚಿತ್ರ ಇದಾಗಿದೆ. ಪ್ರೇಕ್ಷಕರು ಈ ಚಿತ್ರವನ್ನು ನೋಡಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

## ಕಲಾವಿದರಿಗೆ ವೇದಿಕೆ ಕಲ್ಪಿಸುತ್ತಿರುವ ಶಿಲ್ಪಕಲಾ ಅಕಾಡೆಮಿ




ದಾವಣಗೆರೆ

ಕಳೆದ 22 ವರ್ಷಗಳಿಂದ ಶಿಲ್ಪಕಲಾ ಅಕಾಡೆಮಿ ರಾಜ್ಯದ ಶಿಲ್ಪ ಕಲಾವಿದರಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡುತ್ತಾ ಬಂದಿದೆ ಎಂದು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ನಿಕಟ ಪೂರ್ವ ಸದಸ್ಯ ವೈ.ಕುಮಾರ್ ತಿಳಿಸಿದರು.

ನಗರದ ಸಿದ್ದಗಂಗಾ ಮಠ ಎಜುಕೇಷನಲ್ ಅಸೋಸಿಯೇಷನ್ ಆವರಣದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಶ್ರೀ ಸಿದ್ದಗಂಗಾ ಮಠ ಎಜುಕೇಷನಲ್ ಅಸೋಷಿಯೇಶ್ ವತಿಯಿಂದ ರಾಜ್ಯ ಮಟ್ಟದ ಜನಪರ ಶಿಲಾ ಹಾಗೂ ಸಿಮೆಂಟ್ ಶಿಲ್ಪಕಲಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಲ್ಪಕಲಾ ಅಕಾಡೆಮಿಯು ಕಲಾವಿದರನ್ನು ನಿರಂತರವಾಗಿ ಪ್ರೋತ್ಸಾಯಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದೆ. ದಾವಣಗೆರೆ ಎರಡನೇ ಬಾರಿಗೆ ಶಿಬಿರವನ್ನು ಮಾಡಲಾಗುತ್ತಿದೆ. ನಾಡಿನ ವಿವಿಧೆಡೆಯಿಂದ ಆಗಮಿಸಿರುವ ಹತ್ತಕ್ಕೂ ಹೆಚ್ಚು ಶಿಲ್ಪಕಲಾವಿದರು ವಿದ್ಯಾರ್ಥಿಗಳಿಗೆ ಕಲ್ಲು ಮತ್ತು ಸಿಮೆಂಟ್‌ನಿಂದ ಶಿಲ್ಪಕಲೆ ನಿರ್ಮಾಣ ಮಾಡುವುದರ ಕುರಿತು ತರಬೇತಿ ನೀಡಲಿದ್ದಾರೆ ಎಂದರು.

ಸಿದ್ದಗಂಗಾ ವಿದ್ಯಾಂಸ್ಥೆಯ ಮುಖ್ಯ ಶಿಕ್ಷಕಿ ಜಸ್ಟೀನ್ ಡಿಸೋಜಾ ಮಾತನಾಡಿ, ನಮ್ಮ ಶಾಲೆಯು ವಿನೂತನ ಪ್ರಾಯೋಗಿಕ ಕಾರ್ಯಕ್ರಮಗಳನ್ನು ನಿರಂತವಾಗಿ ನಡೆಸಿಕೊಂಡು ಬಂದಿದ್ದು, ಅದೇ ರೀತಿಯಲ್ಲಿಯೂ ಶಿಲ್ಪ ಕಲಾ ಶಿಬಿರವು ಕೂಡ ಒಂದು. ಇಂದಿನಿಂದ ನ.28ರವರೆಗೆ ಸುಮಾರು 15 ದಿನಗಳ ಕಾಲ ಕಾಲಕೃತಿಗಳನ್ನು ರಚಿಸಲಿದ್ದು, ಐದು ಸಾವಿರ ವಿದ್ಯಾರ್ಥಿಗಳು ಶಿಬಿರದ ಪ್ರಯೋಜವನ್ನು ಪಡೆದುಕೊಳ್ಳಲಿದ್ದಾರೆ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್ ಬೆಕ್ಕೇರಿ ಮಾತನಾಡಿ, ಕರ್ನಾಟಕವು ಶಿಲ್ಪಕಲೆ ಇಲ್ಲದೆ ಇತಿಹಾಸ ಪೂರ್ಣಗೊಳ್ಳುವುದಿಲ್ಲ, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಹಂಪಿ ಸೇರಿದಂತೆ ಅನೇಕ ಪ್ರೇಕ್ಷಣಿಯ ಸ್ಥಳಗಳಲ್ಲಿ ಶಿಲ್ಪಕಲಾ ಕೃತಿಗಳನ್ನು ರಚಿಸಲಾಗಿದೆ. ಇವುಗಳನ್ನು ನೋಡಿದರೆ ನಮ್ಮ ನಾಡಿನ ಕಲಾವಿದರು ಎಂಥಹ ಪ್ರತಿಭಾವಂತ ಶಿಲ್ಪಕಲಾವಿದರು ಎನ್ನುವುದು ತಿಳಿಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಶಿಲ್ಪಕಲೆ ಎಂದರೇ ಧ್ಯಾನ. ಆದರೆ ಪ್ರಸ್ತುತ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡುವುದರಿಂದ ಶಿಲ್ಪಕಲೆಗಳ ಆಸಕ್ತಿ ಕುಗ್ಗುತ್ತಿದೆ. ಶಿಲ್ಪಕಲೆಗಳನ್ನು ಉಳಿಸುವ ಮತ್ತು ಹೆಚ್ಚಿನ ಆದ್ಯತೆ ನೀಡುವ ದೃಷ್ಠಿಯಲ್ಲಿ ಅಕಾಡೆಮಿ ನಿರಂತರ ಪ್ರಯತ್ನ ಮಾಡುತ್ತಿದೆ ಎಂದರು.

ಮಕ್ಕಳ ಲೋಕದ ಅಧ್ಯಕ್ಷ ಕೆ.ಎನ್.ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳು ಓದು ಒಂದೇ ಮುಖ್ಯವಾಗುವುದಿಲ್ಲ. ತಮ್ಮ ಬಾಲ್ಯದ ದಿನಗಳಲ್ಲಿ ತಮ್ಮಲಿರುವ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಿ ಕ್ಷೇತ್ರವೊಂದರಲ್ಲಿ ಸಾಧನೆ ಮಾಡಬೇಕು. ಕೇವಲ ಓದುವುದರಿಂದ ಅಂಕ ಗಳಿಸಿ ಎಂಜಿನಿಯರ್, ಡಾಕ್ಟರ್ ಆಗಬಹುದು ಅಷ್ಟೇ. ಆದರೆ ತಮ್ಮ ಚಿಂತನೆ, ಪ್ರತಿಭೆಯಿಂದ ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆಯಬಹುದು ಎಂದರು.

ಮಕ್ಕಳು ಕನಸು ಕಾಣಬೇಕು. ಕಂಡ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಸತತ ಪರಿಶ್ರಮಪಡಬೇಕು. ನಮ್ಮ ನಾಡು ಅಸಾಧಾರಣ ಶಿಲ್ಪಕಲಾವಿದರನ್ನು ವಿಜ್ಞಾನಿಗಳನ್ನು ಕಂಡಿದೆ. ಅಂಥಹ ಮಹನೀಯರ ಆದರ್ಶಗಳು ಕಠಿಣ ಪರಿಶ್ರಮದ ಬಗ್ಗೆ ಗಮನಹರಿಬೇಕೆಂದು ಕರೆ ನೀಡಿದರು.

ರಾಷ್ಟ್ರನಿರ್ಮಾಣದಲ್ಲಿ ಕವಿಗಳು, ಶಿಲ್ಪಕಲಾವಿದರ ಪಾತ್ರ ಅತ್ಯಂತ ದೊಡ್ಡದು. ನಮ್ಮ ಕಲಾವಿದರು ಯಾವುದೇ ಪದವಿ ಪಡೆದವರಲ್ಲ, ಆದರೆ ಅವರು ನಿರ್ಮಾಣ ಮಾಡಿರುವ ಕಲಾಕೃತಿಗಳು ಲೋಕೋತ್ತರವಾದುವುಗಳು. ಅಂಥಹ ಕಲೆಯನ್ನು ತಿಳಿಸಿಕೊಡುವ ಇಂಥಹ ಶಿಬಿರಗಳು ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಸಿದ್ದಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಎಂ.ಶಿವಣ್ಣ, ಕಾಲೇಜು ಆಡಳಿತ ಮಂಡಳಿ ನಿರ್ದೇಶಕ ಜಯಂತ್, ಅಕಾಡೆಮಿಯ ಸದಸ್ಯ ಸಂಚಾಲಕ ಎಚ್.ಎಚ್.ಭರತ್ ರಾಜ್, ಪ್ರವೀಣ್, ಗಣೇಶ್, ಮಲ್ಲೇಶ್ ರಹಮತ್‌ಉಲ್ಲಾ, ಪ್ರಕಾಶ್ ಆಚಾರ್, ಮುತ್ತು ಮತ್ತಿತರರು ಇದ್ದರು.

## ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಭ್ರಷ್ಟಾಚಾರ : ಪ್ರತಿಭಟನೆ

ದಾವಣಗೆರೆ

ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಸಾರ್ವಜನಿಕರು ಮಂಗಳವಾರ ನಗರದ ಪಿಬಿ ರಸ್ತೆಯಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಎಂ.ಟಿ.ಸುಭಾಷ್ ಚಂದ್ರ, ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಣ್ಣ ಕೆಲಸ ಮಾಡಿಸಿಕೊಳ್ಳಬೇಕಾದರೂ ಅಧಿಕಾರಿಗಳು ಸಾರ್ವಜನಿಕರನ್ನು ಹಣಕ್ಕಾಗಿ ಪೀಡಿಸುತ್ತಿದ್ದು, ಈ ಕಚೇರಿಯು ಬ್ರಹ್ಮಾಂಡ ಭ್ರಷ್ಟಾಚಾರದ ಕೇಂದ್ರವಾಗಿದೆ ಎಂದು ಆರೋಪಿಸಿದರು.

ಕಚೇರಿಯ ಸಮೀಪದಲ್ಲಿ ಸುಮಾರು 150 ಜನ ಸ್ಟ್ಯಾಂಪ್ ವೆಂಡರ್‌ಗಳಿದ್ದು, ಇವರುಗಳ ಮೂಲಕ ಅಧಿಕಾರಿಗಳಿಗೆ ಹಣ ಹೋಗುತ್ತದೆ. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ದಿನಕ್ಕೆ ಎರಡು ಲಕ್ಷ ಅಕ್ರಮ ಹಣ ಇಲ್ಲದೆಯೇ ಮನೆಗೆ ಹೋಗುವುದಿಲ್ಲ. ಇದಕ್ಕೆ ನಮ್ಮ ಪ್ರಕರಣವೇ ಸಾಕ್ಷಿಯಾಗಿದೆ ಎಂದು ದೂರಿದರು.

ಡಿ.ಹೆಚ್.ಸಿದ್ದೇಶ್ವರ ಎಂಬುವರು ತನ್ನ ವಾಣಿಜ್ಯ ಮಳಿಗೆಯನ್ನು 2012ರಲ್ಲಿ ಅವರ ಅಣ್ಣನ ಮಗನಾದ ಡಿ.ಹೆಚ್.ಪ್ರದೀಪ್‌ಗೆ ಉಹಿಲು ಬರೆದಿದ್ದರು. ಈ ವೇಳೆ ಸಾಕ್ಷಿಯಾಗಿ ವಯಸ್ಸಾದ ಇಬ್ಬರು ಸಹಿ ಹಾಕಿದ್ದರು. ಡಿ.ಹೆಚ್.ಸಿದ್ದೇಶ್ವರ ಮೃತರಾದ ಮೇಲೆ ಡಿ.ಹೆಚ್.ಪ್ರದೀಪ್‌ಗೆ ಆಸ್ತಿ ಸೇರಬೇಕಾಗಿತ್ತು. ಅದನ್ನು ನೋಂದಣಿ ಮಾಡಿಸಲು ಪ್ರದೀಪ್ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದಾನೆ. ಈ ವೇಳೆ ಅಧಿಕಾರಿ ರವೀಂದ್ರಗೌಡ ಸಾಕ್ಷಿದಾರರನ್ನು ಕರೆಸಿ ಹೇಳಿಕೆ ಪಡೆದುಕೊಂಡಿದ್ದಾರೆ. ಈ ಹೇಳಿಕೆ ಸರಿಯಲ್ಲವೆಂದು ಅವರ ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಅಲ್ಲದೆ, ಆಸ್ತಿ ಮೌಲ್ಯದ ಶೇ.25ರಷ್ಟು ಹಣ ನೀಡಿದರೆ, ಕೆಲಸ ಮಾಡಿಕೊಡುವುದಾಗಿ ಹೇಳಿದ್ದಾರೆ ಎಂದು ದೂರಿದರು.

ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಇಂತಹ ದಂಧೆ, ಲಂಚಗುಳಿತನ ನಿತ್ಯ ನಡೆಯುತ್ತಿದೆ. ಅಧಿಕಾರಿಗಳ ಹಣಬಾಕುತನದಿಂದ ಸಾರ್ವಜನಿಕರು ಬೇಸತ್ತು ಹೋಗಿದ್ದಾರೆ. ಆದ್ದರಿಂದ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಡಿ.ಎಚ್.ಪ್ರದೀಪ್ ಮತ್ತಿತರರು ಹಾಜರಿದ್ದರು.

## ಮೆಕ್ಕೆಜೋಳ ಬೆಂಬಲ ಬೆಲೆ ಕುರಿತು ಇಂದು ಸಭೆ

ದಾವಣಗೆರೆ : 2017-18 ನೇ ಸಾಲಿಗೆ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರವು ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಘೋಷಿಸಿದೆ. ಪ್ರಸ್ತುತ ಜಿಲ್ಲೆಯಲ್ಲಿ ಮೆಕ್ಕೆಜೋಳದ ಧಾರಣೆ ಬೆಂಬಲ ಬೆಲೆಗಿಂತ ಕಡಿಮೆಯಾಗಿದ್ದು, ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ನವೆಂಬರ್ 15 ರಂದು ಬೆಳಗ್ಗೆ 10:30 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಸಭೆಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ಕರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಕರ್ನಾಟಕ ದರ್ಶನ ಪ್ರವಾಸಕ್ಕೆ ಚಾಲನೆ



ದಾವಣಗೆರೆ

ದಕ್ಷಿಣ ವಲಯದ ಪ್ರಸಕ್ತ ಸಾಲಿನ ಇಲಾಖಾ ಮಟ್ಟದ ಕರ್ನಾಟಕ ದರ್ಶನ ಪ್ರವಾಸದ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷೆ ಗೀತಾ ಗಂಗಾನಾಯ್ಕ ಮಂಗಳವಾರ ನಗರದ ಸುಕೃತೀಂದ್ರ ಕಲಾ ಮಂದಿರದ ಆವರಣದಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಉದ್ಘಾಟಿಸಿದರು.

ದಾವಣಗೆರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 3 ಬಸ್ಸುಗಳಲ್ಲಿ 3 ದಿನಗಳ ಕಾಲ ಉತ್ತರ ಕರ್ನಾಟಕದ ಸ್ಥಳಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ನವೆಂಬರ್ 14 ರಿಂದ 17 ರವರೆಗೆ ಉತ್ತರ ಕರ್ನಾಟಕದ ಹಂಪಿ, ಹೊಸಪೇಟೆ, ಕೂಡಲಸಂಗಮ, ಬಾದಾಮಿ, ಪಟ್ಟದಕಲ್ಲು, ಹಾಗೂ ಐಹೊಳೆ ಸೇರಿಂದಂತೆ ಇನ್ನೂ ಮುಂತಾದ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲಿದ್ದಾರೆ. 8 ನೇಯ ತರಗತಿಯ 100 ಬಾಲಕಿಯರು ಹಾಗೂ 50 ಬಾಲಕರು ಸೇರಿದಂತೆ ಒಟ್ಟು 150 ವಿದ್ಯಾರ್ಥಿಗಳು ಈ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕಮದಲ್ಲಿ ಭಾಗವಹಿಸಿದ್ದು, ಮೊದಲನೆಯ ದಿನದಂದು ಹಂಪಿಗೆ ಪ್ರವಾಸ ಕೈಗೊಳ್ಳಲಿದ್ದಾರೆ. ಅನಿತಾಬಾಯಿ ಮಾಲತೇಶ್, ತಾ.ಪಂ ಉಪಾಧ್ಯಕ್ಷರು, ದಾವಣಗೆರೆ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಲತಾ, ಹಾಗೂ ಪ್ರವಾಸ ನೋಡಲ್ ಅಧಿಕಾರಿ ಎಸ್.ಜಿ ನಾಗರಾಜ ಇವರು ಭಾಗವಹಿಸಿ ಪ್ರವಾಸಕ್ಕೆ ಶುಭ ಕೋರಿದರು.

**ನೀರು ಅತ್ಯ ಮೂಲ್ಯ ಮಿತವಾಗಿ ಬಳಸಿ**

## ಮಿತಆಹಾರ-ವ್ಯಾಯಾಮದಿಂದ ಆರೋಗ್ಯವಂತರಾಗಿ

>>> 1ನೇ ಪುಟದಿಂದ... ಡಯಾಬಿಟೀಸ್. ದೇಹದಲ್ಲಿನ ಸಕ್ಕರೆ ಅಂಶವನ್ನು ದೇಹ ಉಪಯೋಗಿಸಿಕೊಳ್ಳಲು ಇನ್ಸುಲಿನ್ ಅವಶ್ಯ. ಆದರೇ ದೇಹ ಸಾಕಷ್ಟು ಇನ್ಸುಲಿನ್ ತಯಾರಿಸುವುದಿಲ್ಲ ಅಥವಾ ತಯಾರಾದ ಇನ್ಸುಲಿನ್ ಅನ್ನು ದೇಹ ಸಮರ್ಪಕವಾಗಿ ಉಪಯೋಗಿಸುವುದಿಲ್ಲ. ಹಿಗಾಗಿ ರಕ್ತದಲ್ಲಿ ಸಕ್ಕರೆಯ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗುತ್ತದೆ ಎಂದರು. ಅಧಿಕ ರಕ್ತದೊತ್ತಡ ಇರುವವರಲ್ಲಿ ಹೃದಯದ ಕಾಯಿಲೆಗಳು ಪಾರ್ಶ್ವವಾಯು (ಲಕ್ವ) ಮತ್ತು ಮೂತ್ರ ಪಿಂಡದ ತೊಂದರೆಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಮೇಲಿಂದ ಮೇಲೆ ತಲೆ ನೋವು, ತಲೆ ತಿರುಗುವುದು, ತಲೆ ಸುತ್ತುಬಂದಂತ್ತಾಗುವುದು, ನಡೆದರೆ ಎದೆಯುಸಿರು ಬರುವುದು, ದೃಷ್ಟಿ ಸಮಸ್ಯೆಗಳು, ಅನಿಯಮಿತ ಹೃದಯ ಬಡಿತ ಈ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಸಮೀಪದ ಆಸ್ಪತ್ರೆಗಳಿಗೆ ತೆರಳಿ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಎನ್ ಬಸರೆಡ್ಡಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ಅನಿಲ್ ಕುಮಾರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳಾದ ಡಾ.ನಿಜಾಮುದ್ದೀನ್, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ರಾಜಶೇಖರ್ ರೆಡ್ಡಿ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಓಂ ಪ್ರಕಾಶ್ ಕಟ್ಟಿಮನಿ ಸೇರಿದಂತೆ ಡಾ.ಆರ್.ವಿಜಯಲಕ್ಷ್ಮಿ, ಡಾ. ಶಗುಫ್ತಾ ಶಾಹಿನ್, ನಂದಾ ಕಡಿ, ಈಶ್ವರ್ ದಾಸಪ್ಪನವರ್, ಕೃಷ್ಣ ನಾಯ್ಕ, ದುರ್ಗೇಶ್ ಮಾಚನೂರ್ ಹಾಗೂ ಶ್ರೀಧರ್ ಮೂರ್ತಿ ಇತರರು ಇದ್ದರು.

ಈ ಜಾಥಾವು ಜಿಲ್ಲಾ ಆಸ್ಪತ್ರೆಯಿಂದ ಪ್ರಾರಂಭವಾಗಿ ಸಂಗಮ್ ಟಾಕೀಸ್, ಕೆ.ಸಿ.ರಸ್ತೆ ಮುಖಾಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿ ಮರಳಿ ಜಿಲ್ಲಾ ಆಸ್ಪತ್ರೆಗೆ ಸೇರಿತು.

ಜಾಗೃತಿ ಜಾಥಾ ನಂತರ ಮಿಲ್ಲರ್‌ಪೇಟೆಯ ನಗರ ಆರೋಗ್ಯ ಕೇಂದ್ರದಲ್ಲಿ ಡಾ.ಇಂದ್ರಾಣಿ ಅನಿಲ್ ಕುಮಾರ್ ಅವರ ನೇತೃತ್ವದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.




ದಿನಾಂಕ:15-11-2017 ಬುಧವಾರ
ತಿಥಿ:ದ್ವಾದಶಿ ನಕ್ಷತ್ರ:ಹಸ್ತ
ಅದೃಷ್ಟ ಸಂಖ್ಯೆ: 0

**ಇಂದಿನ ವಿಶೇಷ**
**ಪ್ರದೋಷ**

ಮೇಷ : ಗುರುತಿಸುವಿಕೆ
ವೃಷಭ : ಸಮಯಪ್ರಜ್ಞೆ
ಮಿಥುನ : ಸಂರಕ್ಷಣೆ
ಕಟಕ : ವಿತರಣೆ
ಸಿಂಹ : ರಾಜ ಕಾರ್ಯ
ಕನ್ಯಾ : ಬೆಂಬಲ ಪ್ರಾಪ್ತಿ
ತುಲಾ :ಸರಾಗ ಕ್ರಿಯೆ
ವೃಶ್ಚಿಕ : ವಿಶೇಷ ಲಾಭ
ಧನಸ್ಸು : ಯಶಸ್ಸು
ಮಕರ : ಕಳಕಳಿ
ಕುಂಭ :ವಿಸ್ತರಣೆ
ಮೀನ : ತಾಂತ್ರಿಕ ಯಶಸ್ಸು

## ಪೋಷಕರು ಸ್ಪಂದಿಸಬೇಕು

>>> 1ನೇ ಪುಟದಿಂದ... ಜಿಲ್ಲೆಯಲ್ಲಿ ಅರ್ಧಕ್ಕೆ ಶಾಲೆ ಬಿಟ್ಟ ಸಾವಿರಾರು ಮಕ್ಕಳನ್ನು ಪುನ: ಶಾಲೆಗೆ ಕರೆತರುವ ಮೂಲಕ ಮಕ್ಕಳ ಹಕ್ಕನ್ನು ಸಂರಕ್ಷಿಸಲು ಜಿಲ್ಲಾಡಳಿತ ಶ್ರಮಿಸುತ್ತಿದೆ. ಇದಕ್ಕೆ ಎಲ್ಲಾ ಇಲಾಖೆಗಳ ಸಹಕಾರ ನೀಡಿದ ಅಧಿಕಾರಿಗಳ ಕಾರ್ಯ ಪ್ರಶಂಸನೀಯವೆಂದರು.

ಗೌಪ್ಯವಾಗಿ ಮಕ್ಕಳಿಗೆ ತಿಂಡಿ, ತಿನಿಸು, ಚಾಕಲೇಟ್, ಐಸ್‌ಕ್ರೀಂ ನೀಡಿ ಪುಸಲಾಯಿಸುವುದು ಅಪಾಯಕಾರಿ ನಡೆ ಎಂದು ಮಕ್ಕಳು ಅರಿತು ಅವರಿಂದ ದೂರವಿರಲು, ಬೇರೆಯವರಿಂದ ನಿಮಗೆ ತೊಂದರೆ, ಕಿರುಕುಳ, ಕಷ್ಟವಾಗುತ್ತಿದ್ದರೆ ಕೂಡಲೇ ಮಕ್ಕಳ ಸಹಾಯವಾಣಿ ನಂ.1098 ಕ್ಕೆ ಕರೆ ಮಾಡಿದಲ್ಲಿ ಜಿಲ್ಲಾಡಳಿತ ನಿಮ್ಮ ಸಹಾಯಕ್ಕೆ ಬರುವುದು ಎಂದು ಭರವಸೆ ನೀಡಿದರು. ಮಕ್ಕಳನ್ನು ಒಳ್ಳೆಯ ಪ್ರಜೆಯನ್ನಾಗಿ ಸಂರಕ್ಷಣೆ ಮಾಡುವುದು ಮನೆಯಿಂದಲೇ ಎಂಬುದನ್ನು ಯಾರೂ ಮರೆಯಬಾರದು ಎಂದು ಸಲಹೆ ಮಾಡಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳು ಹೇಳುವ ಪ್ರತಿಯೊಂದು ಮಾತನ್ನು ಸರಿಯಾಗಿ ಕೇಳಿ ಅವರು ನೀಡುವ ಸಂದೇಶದ ಒಳ ಅರ್ಥವನ್ನು ಗ್ರಹಿಸಲು ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಜಿಲ್ಲೆಯ 14 ಯುವ ಪ್ರತಿಭಾವಂತರಿಗೆ ಹಾಗೂ ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುವ 4 ಯುವಕ್ರೀಡಾಪಟುಗಳಿಗೆ ಶಾಲು ಹೊದಿಸಿ, ಪ್ರಶಸ್ತಿ ಪತ್ರ ನೀಡಿ ಜಿಲ್ಲಾಧಿಕಾರಿಗಳು ಸನ್ಮಾನಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಡಿ.ಕೆ.ಶೀಲಾ ಅವರು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ 2012 ರ ಕಾಯ್ದೆ ಕುರಿತು, ಸುಮನ ಎಸ್.ಅಂಗಡಿ ಅವರು ಮಕ್ಕಳ ಹಕ್ಕುಗಳ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಾಗಾರದಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಎನ್.ರವೀಂದ್ರ, ಪ್ರಥಮ ದರ್ಜೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಹೆಚ್.ಎಂ.ವಿರೂಪಾಕ್ಷಯ್ಯ, ಹಿರಿಯ ಶ್ರೇಣಿ ನ್ಯಾಯಾಧೀಶರಾದ ಎಸ್.ಆರ್.ದಿಂಡಲಕೊಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ರೇವಣಸಿದ್ದಪ್ಪ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎನ್.ಬಿ.ವಿಶ್ವನಾಥ್, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಡಾ: ಆರ್.ಪ್ರಭಾಕರ್, ಸದಸ್ಯರುಗಳಾದ ಜಿ.ಟಿ.ಬಸವರಾಜ್, ಟಿ.ಜಗದೀಶ್, ಮಧುಕರ್, ಇತರ ಗಣ್ಯರುಗಳು ಉಪಸ್ಥಿತರಿದ್ದರು. ಉಪನಿರ್ದೇಶಕ ಕೆ.ಎಸ್.ರಾಜಾನಾಯ್ಕ ಸ್ವಾಗತಿಸಿದರು. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವೈಶಾಲಿ ವಂದಿಸಿದರು.

## ಇಂದು ನೂತನ ಜವಳಿ ನೀತಿ ಯೋಜನೆಯಡಿ ಕಾರ್ಯಾಗಾರ

ದಾವಣಗೆರೆ

ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್ ದಾವಣಗೆರೆ ಹಾಗೂ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಜವಳಿ ತಂತ್ರಜ್ಞಾನ ವಿಭಾಗ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ನೂತನ ಜವಳಿ ನೀತಿ 2013-18ರ ಯೋಜನೆಯಡಿ ಒಂದು ದಿನದ ಕಾರ್ಯಾಗಾರವನ್ನು ನ.15 ರಂದು ಬೆಳಗ್ಗೆ 11 ಗಂಟೆಗೆ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಆರ್. ಗಿರೀಶ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಎ.ಸಿ. ಜಯಣ್ಣ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಎಸ್.ಅಶ್ವತಿ, ಸಿ.ಎಸ್.ಯೋಗೇಶ್, ದಾವಣಗೆರ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ಜಯಪ್ರಕಾಶ್ ನಾರಾಯಣ, ದಾವಣಗೆರೆ ಛೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷರಾದ ಯಜಮಾನ್ ಮೋತಿ ವೀರಣ್ಣ, ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕರಾದ ಪ್ರೊ..ವೈ. ವೃಷಬೇಂದ್ರಪ್ಪ, ಕೆನರಾ ಬ್ಯಾಂಕ್‌ನ ಜಿಲ್ಲಾ ಮಾರ್ಗದರ್ಶಿ ವ್ಯವಸ್ಥಾಪಕರಾದ ಎನ್.ಟಿ ಎರ್ರಿಸ್ವಾಮಿ ಪಾಲ್ಗೊಳ್ಳಲಿದ್ದಾರೆಂದು ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅನಿಷ್ಟ ಪದ್ಧತಿ ತಡೆಗೆ ಪೊಲೀಸರ ಅಸಹಕಾರ

>>> 1ನೇ ಪುಟದಿಂದ... ಪೋಷಕರ ಮೇಲೂ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲು ಅವಕಾಶವಿದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರರೇತರ ಸಂಸ್ಥೆಗಳು ಮಕ್ಕಳ ಪೋಷಕರಲ್ಲಿ ಈ ಬಗ್ಗೆ ಅರಿವು ಮೂಡಿಸಿ, ಎಚ್ಚರಿಸುವ ಕಾರ್ಯ ಮಾಡಬೇಕೆಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಆದರ್ಶ ಸಮಾಜ ಕಾರ್ಯ ಸಂಸ್ಥೆಯ ಕಾರ್ಯದರ್ಶಿ ಎನ್. ಬಿ. ಮಂಜಪ್ಪ ಉಪಸ್ಥಿತರಿದ್ದರು. ಎಂ. ಮಂಜುನಾಥ್ ಪ್ರಾಸ್ತಾವಿಕ ಮಾತನಾಡಿದರು. ಟಿ.ಎಂ.ಕೊಟ್ರೇಶ್ ಸ್ವಾಗತಿಸಿದರು. ಎ.ಎಸ್. ದುಷ್ಯಂತ್ ರಾಜ್ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದರು.

## ಸಂಭ್ರಮ ಸಡಗರದ ಮಕ್ಕಳ ದಿನಚರಣೆ



ಹರಪನಹಳ್ಳಿ

ಮಕ್ಕಳ ದಿನಚರಣೆ ಪ್ರಯುಕ್ತ ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಸಂಭ್ರಮದ ಮಕ್ಕಳ ದಿನಚರಣೆ ಅಂಗವಾಗಿ ವಿವಿಧ ವೇಷಭೂಷಣಗಳಿಂದ ಕಂಗೊಳಿಸದರು. ಆನಂತನಹಳ್ಳಿಯ ಆದರ್ಶ ವಿಧ್ಯಾಲಯ. ಪರ್ಲ ಪಬ್ಲಿಕ್ ಶಾಲೆ, ತರಳಬಾಳು ಹಿರಿಯಪ್ರಾಥಮಿಕಶಾಲೆ, ಆದರ್ಶ ಕಾನ್ವೆಂಟ್, ಪರಿವರ್ತನಶಾಲೆ,ಟಿ.ಎಂ.ಎ.ಇ.ಎಸ್ ಸಂಸ್ಥೆಯ ಎಸ್.ಇ.ಎಸ್.ಡಿ.ಎ.ವಿ.ಪಬ್ಲಿಕ್ ಶಾಲೆ. ಆರ್.ಎಸ್.ಎಸ್.ಎನ್ ಶಾಲೆ. ಮಹೆಶ ಪಬ್ಲಿಕ್ ಸ್ಕೂಲ್ ಸೇರಿದಂತೆ ವಿವಿದ ಶಾಲೆಗಳಲ್ಲಿ ಮಕ್ಕಳ ದಿನಚರಣೆ ಆಚರಿಸಲಾಯಿತು. ಆದರ್ಶ ವಿಧ್ಯಾಲಯದ ಮುಖ್ಯ ಶಿಕ್ಷಕ ಕೆ.ಶಿವನಂದ, ದೈಹಿಕ ಶಿಕ್ಷಕ ಸಂತೋಷ, ತರಳಬಾಳು ಶಾಲೆಯ ಮುಖ್ಯ ಶಿಕ್ಷಕ ನಂಜಪ್ಪ, ಆದರ್ಶ ಕಾನ್ವೆಂಟ್‌ನ ಪಿ ಹಾಲೇಶ.ಸಿ.ಬಸವರಾಜ್. ಪರಿವರ್ತನಶಾಲೆಯ ಅದ್ಯಕ್ಷ ರವಿಅಧಿಕಾರ್. ಟಿ.ಎಂ.ಎ.ಇ.ಎಸ್ ಸಂಸ್ಥೆಯ ಎಸ್.ಇ.ಎಸ್.ಡಿ.ಎ.ವಿ.ಪಬ್ಲಿಕ್ ಶಾಲೆಯ ಆಡಳಿತಾಧಿಕಾರಿ ರೂಪಶ್ರೀ. ಉಪಸ್ಥಿತರಿದ್ದರು.